## ಗುರುತತ್ತ್ವ

# ಶ್ರೀರಾಮಕೃಷ್ಣರು ಮತ್ತು ಗುರುತತ್ತ್ವ

ಡಾ. ಎಚ್.ಎಸ್. ಮುರಳೀಧರ

"ಸಚ್ಚಿದಾನಂದನೇ ಗುರು."

"ಅಂತರ್ಯಾಮಿಯೇ ಗುರು."

ಇವೆರಡೂ, ಗುರುವಿನ ಬಗೆಗೆ ಶ್ರೀರಾಮಕೃಷ್ಣರ ಪ್ರಸಿದ್ಧವಾದ ಹೇಳಿಕೆಗಳು. ಯಾರಾದರೂ ಶ್ರೀರಾಮಕೃಷ್ಣರನ್ನು ಗುರುವೆಂದು ಸಂಬೋಧಿಸಿದಾಗ ಅವರ ಬಾಯಿಂದ ಈ ಮಾತುಗಳು ಬರುತ್ತಿದ್ದವು. 'ಗುರು-ಪಿತಾ-ಕರ್ತೃ' ಎಂಬ ಸಂಬೋಧನೆಗಳಿಂದ ತಮಗೆ ಮುಳ್ಳು ಚುಚ್ಚಿದಂತಾಗುತ್ತದೆ ಎನ್ನುತ್ತಿದ್ದರು ಅವರು. ಒಮ್ಮೆ ಭಕ್ತನೊಬ್ಬ ಅವರ ಮುಂದೆ ಇಂಥವನೊಬ್ಬ ನಿಮ್ಮ ಶಿಷ್ಯನೆಂದು ಹೇಳಿಕೊಳ್ಳುತ್ತಾನೆ ಎಂದಾಗ ಅವರ ಬಾಯಿಂದ ಬಂದ ಮಾತು: "ನನ್ನ ಶಿಷ್ಯ ಅನ್ನಿಸಿಕೊಳ್ಳುವವನು ಜಗತ್ತಿನಲ್ಲೇ ಇಲ್ಲ!" ಹಾಗಾದರೆ ಶ್ರೀರಾಮಕೃಷ್ಣರು ಗುರುವಲ್ಲವೇ! ಈ ಮಾತುಗಳ ಹಿನ್ನೆಲೆಯನ್ನು ಹೇಗೆ ಗ್ರಹಿಸಬೇಕು?

ಮೇಲೆ ಉಲ್ಲೇಖಿಸಿದ ಎರಡು ಪ್ರಸಿದ್ಧವಾದ ಹೇಳಿಕೆಗಳು ಮೇಲ್ನೋಟಕ್ಕೆ ಒಂದೇ ಎನ್ನುವಂತೆ ತೋರಿದರೂ ಅವು ಗುರುತತ್ತ್ವವನ್ನು ಎರಡು ವಿಭಿನ್ನ ನೆಲೆಗಳಿಂದ ನೋಡುತ್ತವೆ ಎಂಬುದನ್ನು ಗಮನಿಸಬಹುದು. ಮೊದಲನೆಯದು, ಅಸ್ತಿತ್ವವನ್ನು ಅಖಂಡವಾಗಿ ನೋಡಿದ್ದರ ನೆಲೆ – **ಸಮಷ್ಟಿಯ ನೆಲೆ**; ಎರಡನೆಯದು – ಅಸ್ತಿತ್ವವನ್ನು ಬಿಡಿಬಿಡಿಯಾಗಿ, ಜೀವಕೋಟಿಯ ವಿವರಗಳ ಕಡೆಯಿಂದ ನೋಡಿದ್ದರ ನೆಲೆ – **ವ್ಯಷ್ಟಿಯ ನೆಲೆ**. ಈ ಎರಡೂ ನೆಲೆಗಳು ಪರಸ್ಪರ ಪೂರಕವೇ ಆದರೂ ಇವರ ಹಿಂದಿರುವ ದರ್ಶನ ವಿಶೇಷವಾಗಿ ಪರಿಶೀಲನಾರ್ಹವಾದುದು. ಈ ಎರಡೂ ನೆಲೆಗಳನ್ನು ಸಮನ್ವಯ ಮಾಡಿಕೊಂಡಾಗ ವ್ಯಾಪಕವಾದ ಸತ್ಯಕ್ಕೂ ಓತಪ್ರೋತವಾಗಿ ವಿವಿಧತೆಯನ್ನು ತಳೆದಿರುವ ಸತ್ಯಕ್ಕೂ ಇರುವ ಸಂಬಂಧದ ಅರಿವು ನಮಗಾಗುತ್ತದೆ.

ಮೊದಲನೆಯದಾಗಿ ಅಖಂಡ ಸಚ್ಚಿದಾನಂದದ ನೆಲೆಯಲ್ಲಿ ಅಜ್ಞಾನಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಅಲ್ಲಿ ಕಲಿಯುವವರೂ ಇಲ್ಲ, ಕಲಿಸುವವರೂ ಇಲ್ಲ. ಇನ್ನು ಇದೇ ಅಖಂಡವೇ ವ್ಯಾವಹಾರಿಕ ನೆಲೆಯಲ್ಲಿ ಉಪಾಧಿಗಳಿಂದಾಗಿ ಬಿಡಿಬಿಡಿಯಾಗಿ ತೋರುತ್ತದೆ ಎನ್ನುವುದು ವೇದಾಂತದ ನಿಲುವು. ಇದನ್ನು ಸ್ಪಷ್ಟಪಡಿಸಲು ಇನ್ನೊಂದು ಉದಾಹರಣೆಯನ್ನು ಬಳಸಿಕೊಳ್ಳಬಹುದು. ಸಮುದ್ರದ ಪ್ರತಿಯೊಂದು ಹನಿಯೂ ಸಮುದ್ರವೇ. ಆದರೆ ಇಡಿ-ಬಿಡಿಗಳನ್ನು ನೋಡುವ ಬೇರೆ ಬೇರೆ ದೃಷ್ಟಿಕೋನಗಳಿಂದಾಗಿ ಸಮುದ್ರವೂ ಹನಿಗಳೂ ಬೇರೆಬೇರೆಯಾಗುತ್ತವೆ. ಆದರೆ ಹನಿಯ ಆತ್ಯಂತಿಕ ಸತ್ಯವಿರುವುದು ಅದರ 'ಸಮುದ್ರಪ್ರಜ್ಞೆ'ಯಲ್ಲಿ. ತಾನು ಅದರಿಂದ ಬೇರಾದ ಹನಿಯೆಂದು ಭಾವಿಸುವುದೇ ಅಜ್ಞಾನದ ನೆಲೆ. ಆದರೆ ಪ್ರಜ್ಞೆಯ ವಿಕಸನದ ಪ್ರಕ್ರಿಯೆ ಮುಂದುವರಿದಂತೆಲ್ಲ, ಯಾವ ಸಮುದ್ರ ಅದಕ್ಕೆ 'ಹನಿ'ಯ ಪ್ರಜ್ಞೆಯನ್ನು ನೀಡಿತ್ತೋ ಅದೇ ಸಮುದ್ರವೇ ಅದಕ್ಕೆ 'ಸಮುದ್ರಪ್ರಜ್ಞೆ' ಯನ್ನು ನೀಡಿ, ತನ್ನಲ್ಲಿ ವಿಲೀನಗೊಳಿಸಿಕೊಳ್ಳುತ್ತದೆ. ಹೀಗೆ ನೋಡಿದರೆ 'ಸಮುದ್ರ'ವೂ ಸಮುದ್ರ; ಪ್ರತಿಯೊಂದು 'ಹನಿ'ಯಲ್ಲಿ ಅಂತರ್ಯಾಮಿಯಾಗಿರುವುದೂ ಅದೇ ಸಮುದ್ರ. ಈ ದೃಷ್ಟಿಯಿಂದ ನೋಡಿದಾಗ ಇಲ್ಲಿ ವ್ಯಷ್ಟಿ-ಸಮಷ್ಟಿಗಳ ನಡುವಿನ ತಾತ್ತ್ವಿಕ ಸಮನ್ವಯ ಕೆಲಸ ಮಾಡಿರುವುದನ್ನು ಗುರುತಿಸಬಹುದು. ಈ ಮೊದಲು ಉಲ್ಲೇಖಿಸಿದ ಶ್ರೀರಾಮಕೃಷ್ಣರ ಎರಡು ಹೇಳಿಕೆಗಳು ಈ ತಾತ್ತ್ವಿಕತೆಗೆ ಸಮಾನಾಂತರವಾಗಿರುವುದನ್ನು ಗುರುತಿಸಬಹುದು.

> ಸಿಕ್ಕಿಸಿಕ್ಕಿದವರೆಲ್ಲಾ ಗುರು ಆಗಲಾರರು. ಮರದ ದಿಮ್ಮಿ ತಾನೂ ತೇಲಿಹೋಗಬಲ್ಲುದು, ಅನೇಕ ಜಂತುಗಳನ್ನೂ ಹೊತ್ತುಕೊಂಡೂ ಹೋಗಬಲ್ಲುದು. ಆದರೆ ಬೆಂಡಿನ ಮೇಲೆ ಹತ್ತಿ ಕುಳಿತರೆ, ಬೆಂಡೂ ಮುಳುಗಿ ಹೋಗುತ್ತದೆ, ಹತ್ತಿದವನೂ ಮುಳುಗಿ ಹೋಗುತ್ತಾನೆ. ಅದಕ್ಕಾಗಿಯೇ ಭಗವಂತ ಯುಗಯುಗದಲ್ಲೂ ಗುರುರೂಪದಿಂದ ಅವತರಿಸುತ್ತಾನೆ. ಸಚ್ಚಿದಾನಂದನೇ ಗುರು. – **ಶ್ರೀರಾಮಕೃಷ್ಣ**

ಇನ್ನು ಈ ಎರಡು ಹೇಳಿಕೆಗಳಿಗೆ ಹಿನ್ನೆಲೆಯಾಗಿರುವ ಶ್ರೀರಾಮಕೃಷ್ಣರ ದಾರ್ಶನಿಕತೆಯ ಸ್ವರೂಪವನ್ನು ಒಂದಿಷ್ಟು ಪರಿಶೀಲಿಸಬೇಕು. ಬಿಡಿಗಳ ನೆಲೆಯಿಂದ ಇಡಿಯ ನೆಲೆಗೇರಿ, ಬಿಡಿ-ಇಡಿಗಳ ನಡುವಿನ ಸಂಬಂಧದ ಯಥಾರ್ಥ ಸ್ವರೂಪವನ್ನು ಸಾರವಾಗಿಸಿಕೊಂಡ ಪ್ರಜ್ಞೆಯೊಂದು ಮಾತ್ರ ಈ ಬಗೆಯ ಹೇಳಿಕೆಗಳನ್ನು ಕೊಡಬಲ್ಲದು. ಈ ಬಗೆಯ ದರ್ಶನದ ವ್ಯಾವಹಾರಿಕ ಪರಿಣಾಮಗಳನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಈ ಪ್ರಜ್ಞೆ ತನ್ನನ್ನು ಅಖಂಡತೆಯೊಂದಿಗೆ ಗುರುತಿಸಿಕೊಳ್ಳುವುದರಿಂದ ಅಲ್ಲಿ ಸ್ವಾರ್ಥವಾಗಲಿ, ಸಂಕುಚಿತ ಬುದ್ಧಿಯಾಗಲಿ, ಅಹಂಕಾರವಾಗಲಿ ಸುಳಿಯಲು ಸಾಧ್ಯವಿಲ್ಲ. ಈ ನೆಲೆಯಲ್ಲಿ ಅದು ದಯೆ, ಕರುಣೆಗಳನ್ನು ಮಾತ್ರ ತೋರಬಲ್ಲುದು. ಎರಡನೆಯದಾಗಿ ಅದು ಈ ಅಖಂಡತೆಯ ಪ್ರತಿಯೊಂದು ಬಿಡಿಯೊಂದಿಗೂ ತನ್ನನ್ನು ಸಮೀಕರಿಸಿಕೊಳ್ಳುವುದರಿಂದ ಪ್ರತಿಯೊಂದು ಬಿಡಿಯನ್ನೂ ಇಡಿಯೊಂದಿಗೆ ಜೋಡಿಸಬೇಕೆಂಬ ಅತೀವ ಕಾಳಜಿಯಿಂದ ನಿಸ್ವಾರ್ಥವಾಗಿ ಶ್ರಮಿಸಬಲ್ಲುದು.

ಶ್ರೀರಾಮಕೃಷ್ಣರ ಜೀವನದ ಆಧಾರದ ಮೇಲೆ ಗುರುತತ್ತ್ವವನ್ನು ವಿಶ್ಲೇಷಿಸುತ್ತ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಸ್ವಾಮಿ ಶಾರದಾನಂದರು ಹೇಳಿರುವ ಒಂದು ಮಾತು ಈ ಸಂದರ್ಭದಲ್ಲಿ ಪ್ರಾಧಾನ್ಯವನ್ನು ಪಡೆದುಕೊಳ್ಳುತ್ತದೆ: "ಶ್ರೀಜಗನ್ಮಾತೆಯು ನೀರು, ಗಾಳಿ, ಆಹಾರ ಮುಂತಾದ ಆವಶ್ಯಕ ವಸ್ತುಗಳ ರೂಪದಲ್ಲಿ ಪ್ರಕಾಶಗೊಳ್ಳುತ್ತಿರುವಂತೆಯೇ, ತ್ರಿತಾಪಗಳಿಂದ ನರಳುತ್ತಿರುವ ಮನುಷ್ಯನನ್ನು ಮಾಯಾಪಾಶದಿಂದ ಬಿಡಿಸಲು ಅಹಂಶೂನ್ಯ ವ್ಯಕ್ತಿಯ ಮೂಲಕ ಗುರುರೂಪದಲ್ಲಿಯೂ ಪ್ರಕಾಶಿಸುತ್ತಿರುವಳು..." ಇಲ್ಲಿ ಗುರುತತ್ತ್ವವನ್ನು ಸ್ವಾಮಿ ಶಾರದಾನಂದರು ವಿಭಿನ್ನ ದೃಷ್ಟಿಕೋನದಿಂದ ಕಂಡಿರುವ ಬಗೆಯನ್ನು ಗುರುತಿಸಬೇಕು. ಇಲ್ಲಿ ಜಗನ್ಮಾತೆಯ ಕಡೆಯಿಂದ ಗುರುವಿನ ಸ್ಥಾನ-ಕ್ರಿಯೆಗಳನ್ನು ಗುರುತಿಸಲಾಗುತ್ತಿದೆ. ಅವರ ಪ್ರಕಾರ ಗುರುತತ್ತ್ವವೆನ್ನುವುದು ಮನುಷ್ಯನಿಗೆ ಮನುಷ್ಯನನ್ನು ('ಸರಿಯಾಗಿ') ತೋರಿಸಲು, ಮನುಷ್ಯನಿಗೆ ಭಗವಂತನನ್ನು ತೋರಿಸಲು ವಿಶ್ವದ 'ಋತ'ದಲ್ಲಿಯೇ ಅಂತರ್ಗತವಾಗಿರುವ ಒಂದು ವ್ಯವಸ್ಥೆ. ಅಂತರ್ಗತವೇಕೆಂದರೆ, ಅದು ಗಾಳಿ-ನೀರು-ಆಹಾರಗಳಂತೆ ವ್ಯವಸ್ಥೆಯ ಆಂತರ್ಯಕ್ಕೆ ಸಂಬಂಧಿಸಿದ್ದೇ ಹೊರತು ಹೊರಗಡೆಯಿಂದ

---

*ಲೇಖಕರು ಬೆಂಗಳೂರಿನ ವಿ.ವಿ.ಎಸ್.ಎಲ್. ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠವನ್ನು ಅಲಂಕರಿಸಿದ್ದವರು; ಉತ್ತಮ ಸಾಹಿತಿ ಮತ್ತು ವಾಗ್ಮಿಗಳು.*

ಹೇರಲ್ಪಟ್ಟದ್ದಲ್ಲ. ಜನಜೀವನದ ಏಳುಬೀಳುಗಳಿಗೆ ಅನುಗುಣವಾಗಿ ಗುರುತತ್ತ್ವದ ಅಭಿವ್ಯಕ್ತಿಗೆ ಪ್ರಕೃತಿಯೇ ಎಡೆಮಾಡಿಕೊಡುತ್ತದೆ. ಸ್ವಾಮಿ ವಿವೇಕಾನಂದರೂ ಇದೇ ಅಭಿಪ್ರಾಯವನ್ನು ಬೇರೊಂದು ರೀತಿಯಲ್ಲಿ ವ್ಯಕ್ತಪಡಿಸುವುದನ್ನು ಕಾಣಬಹುದು.

ಇಷ್ಟು ವಿವೇಚನೆಯ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರ ಜೀವನದಲ್ಲಿ ಸಾಧನೆ ಹಾಗೂ ಸಿದ್ಧಿಗಳ ನಡುವಿನ ಇನ್ನೊಂದು ಬಗೆಯ ಸಮನ್ವಯ ವನ್ನೂ ನಾವಿಲ್ಲಿ ಗುರುತಿಸಬೇಕು. ಸಾಧನಾವಿಧಾನದಲ್ಲಿನ ವೈವಿಧ್ಯ ಅವರ ಜೀವನದಲ್ಲಿ ಎದ್ದುಕಾಣುವ ಸಂಗತಿ. ಹಲವು ದಾರಿಗಳಿಂದ ಪರಮಸತ್ಯದ ರಸಾಸ್ವಾದವನ್ನು ಮಾಡಿದವರು ಅವರು. ಇದನ್ನು 'ಏರುವ' ಹಂತದಲ್ಲಿನ ವೈವಿಧ್ಯವೆಂದು ಕರೆಯೋಣ. ಶ್ರೀರಾಮಕೃಷ್ಣರ ಒಂದು ವೈಶಿಷ್ಟ್ಯವೆಂದರೆ, 'ಇಳಿದ' ಮೇಲೂ ಅವರು ಈ ವೈವಿಧ್ಯಗಳನ್ನು ಉಳಿಸಿಕೊಂಡರು. ಅಷ್ಟೇ ಅಲ್ಲ, ಅದನ್ನೊಂದು ಜೀವನದರ್ಶನವನ್ನಾಗಿ ಪ್ರತಿಪಾದಿಸಿದರು. "ನಾನೇಕೆ ಯಾವಾಗಲೂ ಒಂದೇ ಸ್ವರವನ್ನು ಊದುವವನಾಗಲಿ!" ಎನ್ನುವುದು ಅವರ ನಿಲುವು. ಇದು ವೈಯಕ್ತಿಕ ನೆಲೆಯಲ್ಲಿ, ಕೇವಲ ಅವರ ಸ್ವಂತದ ಸಾಧನೆ-ಸಿದ್ಧಿಗಳ ವಲಯಕ್ಕೆ ಸೀಮಿತವಾಗಲಿಲ್ಲ. ಬದಲಾಗಿ ಸಾಧನೆಯಲ್ಲಿನ ಅಸಂಖ್ಯಾತ ವೈವಿಧ್ಯ ಗಳನ್ನು ಅವು ಇರುವಂತೆಯೇ ಮಾನ್ಯ ಮಾಡುವ ಒಂದು ದರ್ಶನ ವಾಗಿಯೂ ರೂಪುಗೊಂಡಿತು. 'ಇಡಿ'ಯೊಂದನ್ನು 'ಬಿಡಿ'ಗಳಾಗಿ ಅವಲೋಕಿಸಿದಾಗ ಆ ಬಿಡಿಗಳು ಅನಂತವಷ್ಟೆ? ('ಪೂರ್ಣಮದಃ ಪೂರ್ಣಮಿದಂ'). ಆ ಪ್ರತಿಯೊಂದು ಬಿಡಿಯೂ ಇಡಿಯೊಂದಿಗೆ ಏರ್ಪಡಿಸಿಕೊಳ್ಳುವ ಸಂಬಂಧದ ಸ್ವರೂಪವೂ ಅಷ್ಟೇ ವೈವಿಧ್ಯ. ಆದ್ದರಿಂದ ಪ್ರತಿಯೊಂದು 'ಅಂಶ'ವೂ ತನ್ನದೇ ಆದ ರೀತಿಯಲ್ಲಿ ಪೂರ್ಣದೊಂದಿಗೆ ಅನುಸಂಧಾನಮಾಡುತ್ತದೆ. ಈ ಸಂಬಂಧವಾಗಿ ಶ್ರೀರಾಮಕೃಷ್ಣರ ಕೊಡುಗೆ ಏನೆಂಬುದನ್ನು ಸ್ವಾಮಿ ವಿವೇಕಾನಂದರು ಅದ್ಭುತವಾಗಿ ಗುರುತಿಸಿದ್ದಾರೆ: "ಪ್ರತಿಯೊಬ್ಬ ಮನುಷ್ಯನಿಗೂ ಅವನದೇ ಆದ ಭಾಷೆಯಲ್ಲಿ ಧರ್ಮವನ್ನು ಬೋಧಿಸಬೇಕೆಂದು ಹೇಳಬಲ್ಲ ಎದೆಗಾರಿಕೆ ಇದ್ದವರು ಶ್ರೀರಾಮಕೃಷ್ಣರು." ಒಂದೇ ಮೀನನ್ನೋ ತರಕಾರಿಯನ್ನೋ ಬೇರೆಬೇರೆಯವರ ರುಚಿ-ಸಾಮರ್ಥ್ಯಗಳಿಗೆ ಅನುಗುಣವಾಗಿ ಬೇರೆಬೇರೆ ರೀತಿಯಲ್ಲಿ ಉಣಬಡಿಸಬೇಕೆಂದು ಹೇಳುತ್ತಿದ್ದವರು ಶ್ರೀರಾಮಕೃಷ್ಣರು. **ಗುರುವಿನ ಅಂತರ್ಯಾಮಿತ್ವವನ್ನು ಗುರುತಿಸಿದಾಗ ಮಾತ್ರ ಆ ನಿಲುವಿನ ವಿಸ್ತರಣೆಯಾಗಿ ಇಂತಹ ದರ್ಶನ ಮೂಡಿಬರಲು ಸಾಧ್ಯ.**

ಈ ಮೇಲಿನ ವಿವೇಚನೆಯ ಹಿನ್ನೆಲೆಯಲ್ಲಿ ಕಂಡುಬರುವ ಒಂದು ಸಂಗತಿಯೆಂದರೆ, ಗುರುತತ್ತ್ವವೆನ್ನುವುದು ವ್ಯಕ್ತ-ಅವ್ಯಕ್ತಗಳ ನಡುವಿನ ಒಂದು ವಿಶೇಷವಾದ ಸೇತುವೆ ಎನ್ನುವುದು. ಅಲ್ಲದೆ ಅದು ವ್ಯಕ್ತದ ನೆಲೆಯಲ್ಲಿ ಪ್ರತಿಯೊಂದು ಚೈತನ್ಯದೊಂದಿಗೂ ತನ್ನನ್ನು ತಾದಾತ್ಮ್ಯಗೊಳಿಸಿಕೊಂಡು ಅದರ ವಿಕಸನಪ್ರಕ್ರಿಯೆಗೆ ಉತ್ಕರ್ಷವನ್ನು ನೀಡುವ ಶಕ್ತಿಯೂ ಹೌದು. ಇಂತಹ ಗುರುತತ್ತ್ವವೇ ಮಾನವರೂಪವನ್ನು ತಾಳಿದಾಗ 'ಆಚಾರ್ಯ' ಎಂದು ಕರೆಸಿಕೊಳ್ಳುತ್ತದೆ.

ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಯಾರ ಮೂಲಕವಾಗಿ ದೈವೀಶಕ್ತಿ ಕೆಲಸ ಮಾಡುವುದೋ ಆತ ಆಚಾರ್ಯ." "ಆಚಾರ್ಯನಾಗುವುದಕ್ಕಿಂತ ಜೀವನ್ಮುಕ್ತನಾಗುವುದು ಸುಲಭ." "ಹಲವಾರು ಜನ ಮುಕ್ತರಾಗಬಹುದು; ಆದರೆ ಯಾರೆಂದರೆ ಆಚಾರ್ಯ ರಾಗಲು ಸಾಧ್ಯವಿಲ್ಲ." ಈ ಮಾತುಗಳು ಪರೋಕ್ಷವಾಗಿ ಶ್ರೀರಾಮಕೃಷ್ಣರ ಮೂಲಕ ವ್ಯಕ್ತಗೊಂಡ ಗುರುತತ್ತ್ವದ ಮಹಿಮೆಯನ್ನು ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಶ್ರೀರಾಮಕೃಷ್ಣರ ಮೂಲಕ ಪ್ರತಿಪಾದನೆಗೊಂಡ ಗುರುತತ್ತ್ವಕ್ಕೆ ಸ್ವಯಂ ಅವರೇ ವ್ಯಾಖ್ಯೆಯೂ ಹೌದು, ನಿದರ್ಶನವೂ ಹೌದು, ಜೀವಂತಭಾಷ್ಯವೂ ಹೌದು.

## ವಚನಗಳಲ್ಲಿ ಗುರು-ಶಿಷ್ಯ ಸಂಬಂಧ

**ಗುರು ಶಿಷ್ಯ ಸಂಬಂಧವೆಂತಿಪ್ಪುದೆಂದಡೆ ಹೇಳಿಹೆ**
**ಕೇಳಿರೋ, ಅರೆಮರುಳುಗಳಿರಾ,**
**ಕಾಯಗುಣವಳಿದುದೇ ಗುರು, ಜೀವಗುಣವಳಿದುದೇ ಲಿಂಗ,**
**ಪ್ರಾಣಗುಣವಳಿದುದೇ ಜಂಗಮ, ಈ ತ್ರಿವಿಧನರಿದು**
**ಆ ತ್ರಿವಿಧ ನಿಕ್ಷೇಪವನರುಹಿಸಿಕೊಟ್ಟವನೀಗ ಗುರು.**
**ಅಲ್ಲಿ ಉಪದೇಶವ ಕೊಂಡವನೀಗ ಶಿಷ್ಯ**
**ಹೀಗಿರುವದೀಗ ಗುರುಶಿಷ್ಯ ಸಂಬಂಧ**
**ಅದಕ್ಕೆ ನಮೋ ನಮೋ ಎಂಬ**
**ಬಸವಪ್ರಿಯ ಕೂಡಲ ಚೆನ್ನಬಸವಣ್ಣ**

* * *

**ಗುರು ಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯಾ?**
**ಜ್ಯೋತಿಯಿಂದೊದಗಿದ ಜ್ಯೋತಿಯಂತಿರಬೇಕು**
**ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು**
**ಇದುಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ**
**ಮರೀಚಿಕಾ ಜಲದಂತಿರಬೇಕು**

* * *

**ಜ್ಯೋತಿಯೊಳಗಣ ಕರ್ಪುರಕ್ಕೆ,**
**ಅಪ್ಪುವಿನ ಕೈಯಲ್ಲಿಪ್ಪ ಉಪ್ಪುವಿಂಗೆ,**
**ಶ್ರೀಗುರುವಿನ ಹಸ್ತದೊಳಗಿಪ್ಪ ಶಿಷ್ಯಂಗೆ,**
**ಈ ಮೂರಕ್ಕೆಯು ಬೇರೆ ಕ್ರಿಯಾವರ್ತನೆಯುಂಟೇ ಗುಹೇಶ್ವರಾ?**

* * *

**ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ,**
**ಆಗಲಿ ಮಹಾಪ್ರಸಾದವೆಂದೆನಯ್ಯಾ!**
**ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ,**
**ಆಗಲಿ ಮಹಾಪ್ರಸಾದವೆಂದೆನಯ್ಯಾ!**
**ದ್ವಾಪರದಲ್ಲಿ ಶ್ರೀಗುರು ಶಿಷ್ಯನಿಗೆ ಝುಂಕಿಸಿ ಬುದ್ಧಿಯ ಕಲಿಸಿದರೆ,**
**ಆಗಲಿ ಮಹಾಪ್ರಸಾದವೆಂದೆನಯ್ಯಾ!**
**ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ,**
**ಆಗಲಿ ಮಹಾಪ್ರಸಾದವೆಂದೆನಯ್ಯಾ!**
**ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು**

* * *

**ಬೀಜದಿಂದ ಹುಟ್ಟಿದ ವೃಕ್ಷವು ಬೀಜವ ಹೋಲುವಂತೆ,**
**ತಾಯಿಯಿಂದ ಹುಟ್ಟಿದ ಮಕ್ಕಳು ತಾಯಿಯ ಹೋಲುವಂತೆ,**
**ಧಾನ್ಯಂಗಳಿಂದ ಬೆಳೆದ ಬೆಳಸು ಧಾನ್ಯಂಗಳ ಹೋಲುವಂತೆ,**
**ಗುರುವಿನಿಂದ ಹುಟ್ಟಿದ ಶಿಷ್ಯನು ಗುರುರೂಪವಲ್ಲದೆ,**
**ಬೇರೊಂದು ರೂಪವಲ್ಲವಯ್ಯ ಅಖಂಡೇಶ್ವರಾ.**

**(ಸಂಗ್ರಹ:** ಬಿ.ರಾಜಶೇಖರ ದಮ್ಮೂರು, ಕನ್ನಡ ವಿಶ್ವವಿದ್ಯಾಲಯ, ಹಂಪಿ**)**